ರಸ್ತೆಯು ಈ ಪ್ರಾಸ್ತಾವನೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಆ) ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ಮೇಲ್ದರ್ಜಿಗೇರಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಇ) ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವುದರಿಂದ ಸರಕು ಸಾಗಾಣಿ ವಾಹನಗಳಿಗೆ ಅನುಕೂಲವಾಗುತ್ತದೆ.

ಈ) ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಈಗಾಗಲೇ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಮಂಗಳೂರು ಕೋಟೆಪುರ ಮಾರ್ಗವಾಗಿ ಬೋಟುಗಳು

187 : (129)

ಶ್ರೀಮತಿ ಕಲ್ಪನ ಸಿದ್ದರಾಜು (ಮದ್ದೂರು)

ಪ್ರಶ್ನೆ

ಅ) ಕಳೆದ ಮೂರು ವರ್ಷಗಳಿಂದ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಯೋಜನೆಗಳಡಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು;

ಆ) ಬಿಡುಗಡೆಯಾದ ಈ ಅನುದಾನದಲ್ಲಿ ಯಾವ, ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ? ವಿವರಗಳನ್ನು ನೀಡುವುದು;

ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

ಉತ್ತರ

ಅ) ಕಳೆದ ಮೂರು ವರ್ಷಗಳಿಂದ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಯೋಜನೆಗಳಡಿ ಬಿಡುಗಡೆಯಾಗಿರುವ ಅನುದಾನ ರೂ.2582.89 ಲಕ್ಷಗಳು, ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಬಿಡುಗಡೆಯಾಗಿರುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರ ಹಾಗೂ ಪೂರ್ಣಗೊಳಿಸಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು ಕ್ಷೇತ್ರ ಎಲ್.ಎ.ಕ್ಯೂ: 129)
ಅನುಬಂಧ–1

ಕ್ರ.ಸಂ.	ಸಾಲು	ಲೆಕ್ಕಶೀರ್ಷಿಕೆ	ಅನುದಾನ ರೂ.ಲಕ್ಷಗಳಲ್ಲಿ
1	2009–10	ನಂಜುಂಡಪ್ಪ ವರದಿ ರಸ್ತೆ	62.51
		ಎಸ್.ಸಿ.ಪಿ.ನವೀಕರಣ ರಸ್ತೆ	20.34
		5054 ಓ.ಆರ್.ಎಫ್ ರಸ್ತೆ	52.41
		ಸುವರ್ಣ ರಸ್ತೆ	104.12
		3054 ಸೇತುವೆ ನಿರ್ವಹಣೆ	198.00
		ನಬಾರ್ಡ್–14 ರಸ್ತೆ	70.00
		ನಬಾರ್ಡ್–13 ಕಟ್ಟಡಗಳು	16.30
		ನಬಾರ್ಡ್–14 ಕಟ್ಟಡಗಳು	15.94
		3054 ಯೋಜನೆ ರಸ್ತೆ	108.00
		12ನೇ ಹಣಕಾಸು ಯೋಜನೆ ರಸ್ತೆ	149.52
		2216 ವಸತಿ ಯೋಜನೇತರ ಕಟ್ಟಡಗಳು	30.00
		2059 ಲೋ.ಇ.ಯೋಜನೇತರ ಕಟ್ಟಡಗಳು	152.20
		ಒಟ್ಟು	**979.34**
2	**2010–11**	ನಂಜುಂಡಪ್ಪ ವರದಿ (ನಬಾರ್ಡ್) ರಸ್ತೆ	35.32
		ಎಸ್.ಸಿ.ಪಿ.ನವೀಕರಣ ರಸ್ತೆ	16.27
		ಎಸ್.ಸಿ.ಪಿ.ಓ.ಆರ್.ಎಫ್ ರಸ್ತೆ	5.73
		ಎಸ್.ಸಿ.ಪಿ.ನಬಾರ್ಡ್ ರಸ್ತೆ	34.58
		ಟಿ.ಎಸ್.ಪಿ. ರಸ್ತೆ	1.70
		5054–ನಂಜುಂಡಪ್ಪ ವರದಿ ರಸ್ತೆ	20.38
		5054 ಓ.ಆರ್.ಎಫ್ ರಸ್ತೆ	291.67
		ಸುವರ್ಣ ರಸ್ತೆ	78.12
		3054 ಸೇತುವೆ ನಿರ್ವಹಣೆ	200.00
		ನಬಾರ್ಡ್–14 ಕಟ್ಟಡಗಳು	15.94
		ನಬಾರ್ಡ್–15 ಕಟ್ಟಡಗಳು	32.60
		3054 ಎಸ್.ಹೆಚ್. ಯೋಜನೇತರ ರಸ್ತೆ	10.20
		3054 ಜಿ.ಮು.ರ ಯೋಜನೇತರ ರಸ್ತೆ	44.80
		3054 ಎಸ್.ಹೆಚ್. ಯೋಜನೆ ರಸ್ತೆ	10.00
		3054 ಜಿ.ಮು.ರ ಯೋಜನೆ ರಸ್ತೆ	59.25
		4059 ಇಲಾಖಾ ಕಟ್ಟಡಗಳು	85.00
		ಒಟ್ಟು	**941.56**

ಕ್ರ.ಸಂ.	ಸಾಲು	ಲೆಕ್ಕಶೀರ್ಷಿಕೆ	ಅನುದಾನ ರೂ.ಲಕ್ಷಗಳಲ್ಲಿ
3	2011-12	ನಂಜುಂಡಪ್ಪ ವರದಿ (ನಬಾರ್ಡ್) ರಸ್ತೆ	–
		ಎಸ್.ಸಿ.ಪಿ. ನವೀಕರಣ ರಸ್ತೆ	25.63
		ಎಸ್.ಸಿ.ಪಿ. ಓ.ಆರ್.ಎಫ್ ರಸ್ತೆ	70.27
		ಟಿ.ಎಸ್.ಪಿ ಓ.ಆರ್.ಎಫ್ ರಸ್ತೆ	2.14
		ಟಿ.ಎಸ್.ಪಿ ನವೀಕರಣ ರಸ್ತೆ	0.82
		5054 ಓ.ಆರ್.ಎಫ್ ರಸ್ತೆ	362.00
		ಸುವರ್ಣ ರಸ್ತೆ	4.08
		3054 ಎಸ್.ಹೆಚ್. ಯೋಜನೆ ರಸ್ತೆ	20.40
		13ನೇ ಹಣಕಾಸು – 3054 ಜಿ.ಮು.ರ ಯೋಜನೆ ರಸ್ತೆ	142.15
		2059 ಲೋ.ಇ. ಯೋಜನೇತರ ಕಟ್ಟಡಗಳು	6.00
		2216 ವಸತಿ ಯೋಜನೇತರ ಕಟ್ಟಡಗಳು	1.00
		4059 ಇಲಾಖಾ ಕಟ್ಟಡಗಳು	27.50
		ಒಟ್ಟು	**661.99**
		ಒಟ್ಟಾರೆ	**2582.89**

ಎಂ.ಜಿ.ಎಂ.ರಸ್ತೆ ಸಿಂಗಟಗೆರೆ ಬಳಿ ಇರುವ ಸೇತುವೆ

183 : (133)

ಶ್ರೀಮತಿ ಕಲ್ಪನ ಸಿದ್ದರಾಜು (ಮದ್ದೂರು)

ಪ್ರಶ್ನೆ

ಅ) ಮದ್ದೂರು ತಾಲ್ಲೂಕು, ಎಂ.ಜಿ.ಎಂ. ರಸ್ತೆ ಸಿಂಗಟಗೆರೆ ಬಳಿ ಇರುವ ಸೇತುವೆಯು ಸಂಪೂರ್ಣ ತಿಥಿಲಗೊಂಡಿದ್ದು, ಮತ್ತು ಎಂ.ಜಿ.ಎಂ. ರಸ್ತೆ 22 ಕಿ.ಮೀ. ನಿಂದ 26 ಕಿ.ಮೀ.ವರೆಗೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತಿಥಿಲಗೊಂಡಿರುವ ಈ ಸೇತುವೆ ಕಾಮಗಾರಿಯನ್ನು ಮತ್ತು ಹಾಳಾಗಿರುವ ರಸ್ತೆಯನ್ನು ದುರಸ್ಥಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ಅನುದಾನವನ್ನು ನಿಗದಿಪಡಿಸಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸ–ಲಾಗುವುದು?